ನಮ್ಮಪ್ಪನ ಡೈರಿಯನ್ನು ತೆಗೆದರೆ ಇಂಥ ಅನೇಕ ಸ್ವಾರಸ್ಯಕರ ಅಂಶಗಳು ಎದ್ದು ಕಾಣುತ್ತಿದ್ದವು. ನಮ್ಮನೆಯಲ್ಲಿ ಈ ಡ್ರೈವರುಗಳ ಟರ್ನೋವರು ಸಿಕ್ಕಾಪಟ್ಟೆ. ಆನಂದ ಎಂಬ ಡ್ರೈವರೊಬ್ಬರು ಬಂದು ಸೇರಿದ್ದರು. ಆತ ಬಂದು ಸೇರಿದ ತಕ್ಷಣ ಆತ ಸೇರಿಕೊಂಡ ದಿನವನ್ನು ನಮೂದಿಸಿ 'ಆನಂದ ಕೆಲಸಕ್ಕೆ ಸೇರಿದ ದಿನ' ಎಂದು ಬರೆದು 'ಮಾತಾಡಿದ ಸಂಬಳ' 'ಒಪ್ಪಿಕೊಂಡ ಸಂಬಳ' ಎಂದು ಮೂರು ಕಾಲಮ್ಮಿನಲ್ಲಿ ಆತನ ವಿವರಗಳು ಅಪ್ಪನ ಡೈರಿಯಲ್ಲಿ ದಾಖಲಾಗಿರುತ್ತಿತ್ತು. ಕೆಲಕಾಲದ ನಂತರ ಆತ ಕೆಲಸ ಬಿಟ್ಟು ಹೋದಾಗ 'ಆನಂದ ಕೆಲಸ ಬಿಟ್ಟು ಹೋದ ದಿನ' ದಾಖಲಾಗಿತ್ತು. ನಂತರ ಅಪ್ಪಾಜಿ ಎನ್ನುವವರು ಬಂದರು. ಕೆಲಕಾಲದ ನಂತರ ಅವರೂ ಬಿಟ್ಟುಹೋದಮೇಲೆ ಮತ್ತೆ ಆನಂದನೇ ಬಂದು ಕೆಲಸಕ್ಕೆ ಸೇರಿಕೊಂಡಾಗ ನಮ್ಮಪ್ಪನ ಡೈರಿ ಎಂಟ್ರಿಗಳೆಲ್ಲ ಏರುಪೇರಾಗತೊಡಗಿದವು. 'ಆನಂದ ಕೆಲಸಕ್ಕೆ ಸೇರಿದ ದಿನ' ಈಗ 'ಆನಂದ ಮೊದಲನೇ ಬಾರಿ ಕೆಲಸಕ್ಕೆ ಸೇರಿದ ದಿನ' ಎಂದಾಯಿತು. ಆತ ಕೆಲಸ ಬಿಟ್ಟ ದಿನ 'ಮೊದಲ ಬಾರಿಗೆ ಕೆಲಸ ಬಿಟ್ಟ ದಿನ' ಆಯಿತು. ಈಗಿನ ಎಂಟ್ರಿ 'ಆನಂದ ಎರಡನೇ ಬಾರಿ ಕೆಲಸಕ್ಕೆ ಸೇರಿದ ದಿನ' ಎಂದಾಯಿತು. ಈತ ಎಷ್ಟು ಬಾರಿ ನಮ್ಮಲ್ಲಿ ಕೆಲಸಕ್ಕೆ ಸೇರಿ ಬಿಟ್ಟು ಹೋದ ಎಂದರೆ ನಮ್ಮಪ್ಪನಿಗೆ ಲೆಕ್ಕ ತಪ್ಪಿ ಕೊನೆಗೆ ಆತನನ್ನು ಇನ್ನು ಕೆಲಸಕ್ಕೆ ಸೇರಿಸಲೇಬಾರದು ಎಂದು ನಿರ್ಧಾರ ಮಾಡಿದಾಗ 'ಆನಂದನ ಕೊನೇ ದಿನ' ಎಂದು ಬರೆದಿದ್ದು, ಅದು ಯಾಕೋ ಸರಿಯಾಗಿ ಕಾಣುತ್ತಿಲ್ಲವೆಂದು ಅವರೇ ನಿರ್ಧರಿಸಿ 'ಆನಂದ ಶಾಶ್ವತವಾಗಿ ನಮ್ಮನ್ನು ಬಿಟ್ಟು ಹೋದ ದಿನ' ಎಂದು ಬರೆದು ಅದೂ ಸರಿಕಾಣದೆ 'ಆನಂದನ ಈ ಬಾರಿಯ ಕಡೇ ದಿನ' ಎಂದು ಓಪನ್ ಎಂಡೆಡ್ ಆಗಿ ಇಟ್ಟಿದ್ದರು. ಆದರೆ ಅದು ಓಪನ್ ಎಂಡೆಡ್ ಆಗಿಯೇ ಉಳಿದುಕೊಂಡಿತ್ತು.

ಮೊಬೈಲುಗಳು ಬಂದಮೇಲೆ ಮನೆಯ ಕೆಲಸಗಳೆಲ್ಲವೂ ಮೊಬೈಲಿನಿಂದಲೇ ಆಗತೊಡಗಿದಾಗ ಅವರ ಈ ದಾಖಲಾ ಪ್ರಪಂಚ ಅಲುಗಾಡತೊಡಗಿತು. ಎಷ್ಟೇ ಕಷ್ಟವಾದರೂ ಪ್ರಕಾಶ್ ಗ್ಯಾಸ್ ಏಜೆನ್ಸಿಗೆ 'ಸಿಲಿಂಡರ್ ಮನೆಗೆ ಕಳಿಸಿ' ಎಂದು ಫೋನು ಮಾಡಿ, ಎರಡು ದಿನ ತಡೆದು ಒಂದು ಸುತ್ತು ಕಾರಿನಲ್ಲಿ ಆತನ ಏಜೆನ್ಸಿಗೆ ಹೋಗಿ ಹುಡುಗರಿಗೆ ಯಾಕಿನ್ನೂ ಗ್ಯಾಸ್ ಸಿಲಿಂಡರ್ ಕಳಿಸಿಲ್ಲ ಎಂದು ಆವಾಜ್ ಹಾಕಿಬಂದು, ನಂತರ ಸಿಲಿಂಡರ್ ತಂದಿಡುವ ಹುಡುಗನ ಜತೆಗೂ ಕೊಂಚ ಮಶ್ಕಿರಿ ಮಾಡಿ, ಕಾಫಿಗೆ ಭಕ್ಷೀಸುಕೊಟ್ಟು ನಂತರ ಇನ್ನೊಮ್ಮೆ ಏಜೆನ್ಸಿಗೆ ಫೋನು ಮಾಡಿ ಸಿಲಿಂಡರ್ ಕನೆಕ್ಷನ್ ಕೊಡುವುದಕ್ಕೆ ಕೆಲವೊಮ್ಮೆ ಅಪ್ಪನೇ ಮನೆಯಿಂದ ಹೋಗಿ ಕರಕೊಂಡು ಬಂದು–ಒಟ್ಟು ಸತತ ಮನುಷ್ಯಸಂಪರ್ಕದಲ್ಲಿರುವುದು ಅವರಿಗೆ ಬೇಕಿತ್ತು. ನಾವು ಸುಮ್ಮನೆ ಆ ಗಲಾಟೆಯಲ್ಲಿ ಸಾಲಿನಲ್ಲಿ ಯಾಕೆ ನಿಲ್ಲುತ್ತೀಯಾ ಎಂದು ಮೊಬೈಲಿನಲ್ಲಿಯೇ ಗ್ಯಾಸ್ ಸಿಲಿಂಡರ್ ಆರ್ಡರ್ ಮಾಡುವ ಹಾಗೆ ಆಟೊಮ್ಯಾಟಿಕ್ ಮೆಸೇಜಿಂಗ್ ಎಲ್ಲವನ್ನು ವ್ಯವಸ್ಥೆಮಾಡಿದ್ದೆವು. ಸಿಲಿಂಡರ್ ಬರುತ್ತಿದೆ ಎಂದು ಮೆಸೇಜು ತಂತಾನೇ ಬರುತ್ತಿತ್ತು. ಯಾರೋ ಬಂದು ಸಿಲಿಂಡರ್ ಡೆಲಿವೆರಿ ಮಾಡುತ್ತಿದ್ದರು. ಇನ್ಯಾರೋ ಬಂದು ಕನೆಕ್ಷನ್ ಕೊಟ್ಟು ಹೋಗುತ್ತಿದ್ದರು. ಮುಂದಿನ ಬಾರಿ ಅಪ್ಪನ ಡೈರಿ ನೋಡಿದಾಗ ಅದರಲ್ಲಿ ಐದು ಕಾಲಂ ಕಾಣಿಸಿತ್ತು.

ಸಿಲಿಂಡರ್ ಖಾಲಿಯಾದ ದಿನ
ಗ್ಯಾಸ್ ಬೇಕೆಂದು ಮೆಸೇಜ್ ಮಾಡಿದ ದಿನ
ಸಿಲಿಂಡರ್ ಡೆಲಿವರಿಯಾಗಿದೆ ಎಂದು ಎಸ್ಸೆಮ್ಮೆಸ್ ಬಂದ ದಿನ
ಸಿಲಿಂಡರ್ ಬಂದ ದಿನ
ಕನೆಕ್ಷನ್ ಕೊಟ್ಟ ದಿನ